# ಬಲರಾಮನ ಭಾರತ ತೀರ್ಥಯಾತ್ರೆ - ಒಂದು ನೋಟ

**ಡಾ. ವಿಶ್ವನಾಥ ಎಂ.ವಿ.**

ಮಹಾಭಾರತದಲ್ಲಿ ಬರುವ ಬಲರಾಮನ ತೀರ್ಥಯಾತ್ರೆ ನಮ್ಮ ಪರಂಪರೆಯಲ್ಲಿ ತೀರ್ಥಯಾತ್ರೆಗಿರುವ ಮಹತ್ವವನ್ನು ತಿಳಿಸಿಕೊಡುವುದರೊಂದಿಗೆ, ಹಲವಾರು ತೀರ್ಥಕ್ಷೇತ್ರಗಳ ಬಗೆಗಿನ ಮಾಹಿತಿ, ಅವುಗಳ ಮಹಿಮೆ ಇವುಗಳನ್ನೂ ಇಲ್ಲಿ ವರ್ಣಿಸಲಾಗಿದೆ. ಈ ಕುರಿತು ಬರೆದಿರುವ ಲೇಖಕರು ಅಮೃತ ವಿಶ್ವ ವಿದ್ಯಾಪೀಠದ ಬೆಂಗಳೂರು ಶಾಖೆಯಲ್ಲಿ ಸಹಾಯಕ ಪ್ರಾಧ್ಯಪಕರಾಗಿದ್ದಾರೆ. ರಾಮಕಥೆಯ ಇಯತ್ತಾನಿರ್ಣಯ ವಿಷಯಕ ಸಂಶೋಧನೆಯಲ್ಲಿ ಪ್ರಧಾನ ಗವೇಷಕರಾಗಿದ್ದಾರೆ. ಅಲಂಕಾರ ಶಾಸ್ತ್ರ ಹಾಗೂ ಜ್ಯೋತಿಷ್ಯ ಶಾಸ್ತ್ರದಲ್ಲಿ ಆಚಾರ್ಯ ಪದವಿ, ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಸಾಹಿತ್ಯ ಶಾಸ್ತ್ರದಲ್ಲಿ 'ವಿದ್ಯಾವಾರಿಧಿ' ಪದವಿಯನ್ನು ಅವರು ಪಡೆದಿದ್ದಾರೆ.

**ಗಾಯಂತಿ ದೇವಾಃ ಕಿಲ ಗೀತಕಾನಿ**
**ಧನ್ಯಾಸ್ತು ತೇ ಭಾರತಭೂಮಿ ಭಾಗೇ ।**
**ಸ್ವರ್ಗಾಪವರ್ಗಾಸ್ಪದ ಮಾರ್ಗಭೂತೇ**
**ಭವಂತಿ ಭೂಯಃ ಪುರುಷಾಃ ಸುರತ್ವಾತ್ ॥**

'ಯಾವ ಪವಿತ್ರತಮವಾದ ಭೂಮಿಯನ್ನುದ್ದೇಶಿಸಿ ದೇವತೆಗಳೂ ಹಾಡಿ ಹೊಗಳುವರೋ, ಅಂತಹ ಭಾರತ ಭೂಮಿಯಲ್ಲಿ ಜನ್ಮವೆತ್ತ ಜಂತುಗಳೇ ಧನ್ಯರು' ಎಂದು ವಿಷ್ಣುಪುರಾಣವು ಸಾರುತ್ತದೆ. ಪ್ರಪಂಚಾದ್ಯಂತ ಕಣ್ಣು ಕೋರೈಸುವ ಅಸಂಖ್ಯ ಪ್ರದೇಶಗಳಿದ್ದರೂ, ಅಪರಿಮಿತವಾದ ಭೋಗ-ಭಾಗ್ಯಗಳನ್ನು ಸಾಧಿಸಲನುಕೂಲವಾದ ದೇಶಗಳಿದ್ದರೂ, ಭಾರತದೇಶವನ್ನು ಕುರಿತಾಗಿ ಮಾತ್ರವೇ ಆಡಿರುವ ಮಾತುಗಳು ಕೇವಲ ಸಾಮಾನ್ಯ ವ್ಯಕ್ತಿಗಳಿಗಲ್ಲದೇ, ವಿದ್ಯಾ-ವಿವೇಕ ಸಂಪನ್ನರಾದರವರಲ್ಲೂ ಹುಬ್ಬೇರಿಸಿ ಅದರ ಹಿಂದಿನ ಆಶಯವನ್ನೋ, ಅಂತರಾಳವನ್ನೋ ಅರಿಯಬೇಕೆಂಬ ಹಂಬಲವನ್ನು ಹುಟ್ಟು ಹಾಕದಿರುವುದಿಲ್ಲವಷ್ಟೇ. ಸ್ವರ್ಗಕ್ಕೂ, ಅದಕ್ಕೂ ಮಿಗಿಲಾದ ಅಪವರ್ಗಕ್ಕೂ ಎಣೆಯಾಗುವ ಭೂಮಿ ಭಾರತ. ಬೇರೆಲ್ಲಾ ಭೂಪ್ರದೇಶಗಳಲ್ಲಿ ಇಹಲೋಕದ ಚಿಂತನೆ ಮಾತ್ರ ಇದ್ದು, ಇಹದಲ್ಲಿ ಇದ್ದಷ್ಟು ಕಾಲ ಇಂದ್ರಿಯಗಳಿಗೆ ಸ್ವಲ್ಪವೂ ಕೊರತೆಯಾಗದಂತೆ, ಆ ಇಂದ್ರಿಯಗಳಿಂದ ಗ್ರಹಿಸುವ ವಿಷಯಗಳು ಬದುಕಿನುದ್ದಕ್ಕೂ ಕೊರತೆಯನ್ನನುಭವಿಸದಂತೆ ಆದಲ್ಲಿ ಇತರರಿಗೆ ಸಹಾಯ ಮಾಡಿ, ಇಲ್ಲದಿದ್ದಲ್ಲಿ ತನ್ನ ಭೋಗಕ್ಕೆ ಕುಂದುಂಟಾಗದಂತೆ ಬಾಳುವುದೇ ಬದುಕೆಂಬಂತಹ ಒಂದು ಮಾದರಿಯಿರುವುದು. ಈ ರೀತಿಯ ಬಾಳುವಿಕೆಯನ್ನಲ್ಲಗೆಳೆಯುವುದು ಈ ಲೇಖನದ ಉದ್ದೇಶವಲ್ಲ. ಆದರೆ ಇಂತಹ ಬಾಳಾಟವಲ್ಲದೆ ಇಹ, ಪರಗಳ ಸಾಮರಸ್ಯವನ್ನು ಸಂಪಾದಿಸಿಕೊಳ್ಳುವಂತಹ , ಪರಲಕ್ಷ್ಯಕ್ಕೆ ಧಕ್ಕೆ ಬಾರದಂತೆ ಇಹದಲ್ಲೂ, ಇಹವನ್ನು-ಇಹದ ಕರ್ತವ್ಯವನ್ನು ಮರೆಯದಂತೆ ಪರದಲ್ಲೂ,

**ಕಲ್ಪಾಯುಷಾಂ ಸ್ಥಾನಜಯಾತ್ ಪುನರ್ಭವಾತ್**
**ಕ್ಷಣಾಯುಷಾಂ ಭಾರತಭೂಜಯೋ ವರಮ್**

*(ಭಾಗವತ ೫.೧೯-೨೩)*

ಎಂಬಂತೆ ಕ್ಷಣಮಾತ್ರವಾದರೂ, ಕ್ರಿಮಿಯಾಗಿಯಾದರೂ ಎಲ್ಲಿ ಬದುಕಬೇಕೆಂಬ ಬಯಕೆಯ ನಿಮಿತ್ತವಾಗಿ ಜನ್ಮತಾಳಿ ಬಾಳುವೆವೋ ಆ ದೇಶವೇ ಭಾರತ. ಪವಿತ್ರವಾದ ಕೆಲವಾರು ಪ್ರದೇಶಗಳಿಂದ ಕೂಡಿರುವ ದೇಶ ನಮ್ಮದಾಗಿರದೇ ಸಮಗ್ರ ದೇಶವೇ ಪವಿತ್ರವಾಗಿರುವಂತಹುದಾಗಿದೆ. ಹಾಗಾಗಿಯೇ, ಶೀರ್ಷಿಕೆಯಲ್ಲಿ ನಮೂದಿಸಿರುವ ಭಾರತತೀರ್ಥಯಾತ್ರೆ ಎಂಬ ಶಬ್ದವು ಭಾರತದ ಅಥವಾ ಭಾರತದಲ್ಲಿ ತೀರ್ಥಯಾತ್ರೆ ಎಂಬ ಭಾವವನ್ನೀಯದೇ, ಭಾರತವೆಂಬ ತೀರ್ಥದ ಯಾತ್ರೆಯೆಂಬರ್ಥವನ್ನು ಕೊಡುವುದು. ತೀರ್ಥವು ಭಾರತವಾಗುವುದೇ? ಎಂಬ ಪ್ರಶ್ನೆಗೆ ಸಮರ್ಪಕವಾದ ಉತ್ತರವು ದೊರಕಿದಲ್ಲಿ, ಭಾರತತೀರ್ಥಯಾತ್ರೆಯು ಸಫಲವಾದೀತು.



''ಭಾರೂಪಸ್ಸತ್ಯಕಾಮಸ್ಸತ್ಯಸಂಕಲ್ಪಃ'' ಎಂಬ ಉಪನಿಷದ್ವಾಣಿಯಂತೆ, ಪರಾತ್ ಪರತರವಾದ ಪರಂಜ್ಯೋತಿಯೇ 'ಭಾ' ಎಂದು

ಕರೆಯಲ್ಪಡುವುದು. ಅಂತಹ ಪರಂಜ್ಯೋತಿಯಲ್ಲಿ ನಿರತರಾದವರು ಭಾರತರು. ಅಂತಹ ಪರಂಜ್ಯೋತಿಯಲ್ಲಿ ನಿರತವಾಗಲನುಕೂಲವಾದ ದೇಶ ಭಾರತ. ಆ ಪರಂಜ್ಯೋತಿಯಲ್ಲಿ ನಿರಂತರವಾದ, ನಿಯತವಾದ ನಿರತತೆಯೇ ಭಾರತತೆ. ಅಂತಹ ಭಾರತಕ್ಕೆ ಸಂಬಂಧಪಟ್ಟದ್ದೆಲ್ಲಾ ಭಾರತೀಯ. ತೀರ್ಥವೆಂಬ ಶಬ್ದವು ತೃ ಪ್ಲವನ ತರಣಯೋಃ ಎಂಬ ಧಾತುವಿನಿಂದ ಆಗಿರುವುದು. ತೀರ್ಯತೇ ಅನೇನ ಇತಿ ಎಂಬುದು ಅದರ ವ್ಯುತ್ಪತ್ತಿ. ಯಾವುದನ್ನು ಆದರದಿಂದ ಸೇವಿಸಿದಲ್ಲಿ ಇಹದಿಂದ ಪರಕ್ಕೆ ದಾಟುವೆವೋ ಅದೇ ತೀರ್ಥ. ಆತ್ಮಜ್ಞಾನವನ್ನು ದಯಪಾಲಿಸುವ ಗುರುವನ್ನು ಆದರದಿಂದ ಭವಬಂಧನದಿಂದ ದಾಟಿಸುವ ನೌಕೆಯೆಂದು ಭಾವಿಸಿದ ಪಕ್ಷ, ಗುರುವೇ ತೀರ್ಥನಾಗುವನು. ಪರಮೇಶ್ವರನಿಗೆ ಸಮರ್ಪಿಸಿದ ಜಲವು ನಮ್ಮನ್ನು ಸಂಸಾರಭಯದಿಂದ ಪಾರುಮಾಡುವುದೆಂದು ಭಾವಿಸಿ ಸ್ವೀಕರಿಸಿದಾಗ ಅದುವೇ ತೀರ್ಥವಾಗುವುದು. ಋಷಿಗಳು ಆತ್ಮಾನಂದಾನುಭವಭರಿತವಾದ ತಮ್ಮ ದೃಷ್ಟಿಯಿಂದಲೂ, ಸ್ಪರ್ಶದಿಂದಲೂ, ಯಾವ ನೀರಿನ ಅಂಶವನ್ನು ಸೇವಿಸುವರೋ, ಅದೂ ತೀರ್ಥ. ಅಂತರಂಗದರ್ಶನದಿಂದ ಅಂತರ್ವಾಣಿಗಳು ಹಾಕಿಕೊಟ್ಟ, ಯಾವ ಚೌಕಟ್ಟನ್ನು ಚಾಚೂ ತಪ್ಪದೆ ಪಾಲಿಸಿದಲ್ಲಿ ಸಂಸಾರ ಭೀತಿಯಿಂದ ರಕ್ಷೆ ಸಿಗುವುದೋ, ಆ ಶಾಸ್ತ್ರವೂ ತೀರ್ಥ. ಜಗತ್ತಿನಲ್ಲಿರುವ ಶುದ್ಧೀಕರಿಸಲುಪಯುಕ್ತವಾದ ಎರಡು ಪದಾರ್ಥಗಳಲ್ಲೊಂದಾದ ಯಾವ ಅಗ್ನಿದೇವನಲ್ಲಿ ದೇವತೆಗಳನ್ನುದ್ದೇಶಿಸಿ ದ್ರವ್ಯ ತ್ಯಾಗವನ್ನು ಮಾಡುವೆವೋ, ಆ ಯಜ್ಞವೂ ತೀರ್ಥ. ಯಾವ ನೆಲದಲ್ಲಿ ಕಾಲಿಟ್ಟ ಮಾತ್ರದಿಂದ ಪಾಪಗಳು ತೊಲಗಿ, ಆತ್ಮಾನುಸಂಧಾನಕ್ಕೆ ಪೋಷಕವಾಗುವ ಧರ್ಮವೇರ್ಪಡುವುದೋ, ಆ ಕ್ಷೇತ್ರವೂ ತೀರ್ಥ. ಯಾವುದನ್ನಾಶ್ರಯಿಸುವದರಿಂದ ಪುರುಷಾರ್ಥ ಪರಿರಕ್ಷಣೆಯಾಗುವುದೋ, ಆ ಉಪಾಯವೂ ತೀರ್ಥ. ಯಾವಾಕೆಯಲ್ಲಿ ಜಗಜ್ಜನನಿಯ ಶಕ್ತಿಯಿಂದಾಗಿ ಸೃಷ್ಟಿ ಕಾರ್ಯಕ್ಕೆ ಅನುಕೂಲವಾದ ಶರೀರಧರ್ಮ ಮನೋಧರ್ಮಗಳಿರುವುದೋ, ಆ ನಾರಿಯೂ ತೀರ್ಥ. ಪ್ರಪಂಚದ ಸ್ಥಿತಿಯನ್ನು ಕಾಪಿಡಲು ಭಗವಂತನ ಯಾವ ಯಾವ ರೂಪಗಳುಂಟೋ, ಆ ಅವತಾರಗಳೆಲ್ಲವೂ ಸಹ ತೀರ್ಥ. ಯಾವ ಬ್ರಹ್ಮಶಕ್ತಿಯು ಕ್ಷಾತ್ರದೊಡಗೂಡಿ ಚತುರ್ವರ್ಗವನ್ನು ಸಾಧಿಸಿಕೊಡುವುದೋ ಅಂತಹ ಮಂತ್ರಾಲೋಚನೋನ್ಮುಖಿಯಾದ ಮಂತ್ರಿಯೂ ತೀರ್ಥ. ನೀರವತರಿಸುವ ಜಾಗವೂ ತೀರ್ಥ. ಜ್ಞಾನಮಯವಾದ ವೇದವೂ ತೀರ್ಥ, ವೇದಗಳ ಮರ್ಮವನ್ನರಿತ ವೇದವಿತ್ತೂ ತೀರ್ಥ.

**ನಿಪಾನಾಗಮಯೋಸ್ತೀರ್ಥಂ ಋಷಿಜುಷ್ಟೇಜಲೇ ಗುರೌ**

*(ಅ.ಕೋ., ೩.೩.೮೬)*

**ತೀರ್ಥಂ ಶಾಸ್ತ್ರಾಧ್ವರಕ್ಷೇತ್ರೋಪಾಯನಾರೀರಜಃಸ್ಸು ಚ।**
**ಅವತಾರರ್ಷಿಜುಷ್ಟಾಂಬುಪಾತ್ರೋಪಾಧ್ಯಾಯಮಂತ್ರಿಷು ॥**

*(ಮೇದಿನೀ, ೭೨.೭)*

ಈ ರೀತಿಯಾಗಿ ನೀರಿನ ಆಕರದಿಂದ ಹಿಡಿದು ಜ್ಞಾನಮಯವಾದ ವೇದ ಪರ್ಯಂತ ತೀರ್ಥವೆಂಬ ಪದವಿದೆಯೆಂಬುದು ಕೋಶಾದಿಗಳಿಂದ ತಿಳಿಯಬರುವುದು.

ಪದವು ಪದಾರ್ಥವನ್ನು ಪರಿಚಯಿಸುತ್ತದೆ. ಅರ್ಥದ ವ್ಯಾಪ್ತಿ, ಆಳ ಅಗಲ-ಇವೆಲ್ಲವನ್ನೂ ಪದವೇ ಪರಿಚಯಿಸುತ್ತದೆ. ಪ್ರತಿಯೊಂದು ಪದಾರ್ಥದ ಮೂಲವೂ ಆ ಪರಂಜ್ಯೋತಿಯೇ ಆಗಿರುವುದು. ಹಾಗಾಗಿ, ಪದವು ನಮ್ಮನ್ನು ಪದಾರ್ಥದ ಮೂಲದಲ್ಲಿ ಬೆಳಗುವ ಜ್ಯೋತಿಯವರೆಗೂ ಕರೆದೊಯ್ಯುವುದು. ಹಾಗಾದಾಗ ಮಾತ್ರವೇ ತೀರ್ಥವೆಂಬ ಪದದ ಸಾರ್ಥಕತೆಯೂ ಹಾಗು ಭಾರತತೆಯೂ ಪ್ರತೀಕವಾಗುವುದು. ಈ ರೀತಿಯಾದ ಭಾರತ ತೀರ್ಥವು ಯಾತ್ರೆಯಾಗುವುದೆ? ಎಂಬ ಪ್ರಶ್ನೆಯ ಉತ್ತರವು ಅತ್ಯವಶ್ಯವಾಗಿರುವುದು.

ಯಾತ್ರೆಯೆಂಬುದು ಗಮನವೆಂಬ ಅರ್ಥದಲ್ಲಿದೆಯೆಂದು ಕೋಶವು ತಿಳಿಸುವುದು, ''ಯಾತ್ರಾ ಸ್ಯಾದ್ಯಾಪನೇ ಗತೇ'' *(ಅ.ಕೋ. ೩.೩.೧೭೫)* ವಸ್ತುತಃ ಯಾತನಾತ್ ತ್ರಾಯತೇ ಇತಿ ಯಾತ್ರಾ ಎಂಬ ವ್ಯುತ್ಪತ್ತಿಯು ಯಾತ್ರಾ ಶಬ್ದದ ಅಂತರಾರ್ಥವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವುದು. ಯಾತನೆಯು ಸಂಸಾರದ ಜನನ-ಮರಣಬಂಧನದಿಂದುಟಾದದ್ದಾಗಲಿ ಅಥವಾ ಆಧ್ಯಾತ್ಮಿಕಾದಿ ತಾಪತ್ರಯಗಳಿಂದುಂಟಾದದ್ದಾಗಲಿ ಆಗಿರುತ್ತದೆ. ತೀರ್ಥವು ಭಾರತವಾಗಬೇಕಾದಲ್ಲಿ, ಅದಕ್ಕೆ ಅಡ್ಡಿಯೊಡ್ಡುವ ಸಕಲ ಯಾತನೆಗಳಿಂದ ಪಾರು ಮಾಡಬೇಕಾಗುವಷ್ಟು ಸಾಮರ್ಥ್ಯವನ್ನು ಅದು ಹೊಂದಿರಬೇಕಾಗುತ್ತದೆ. ಆಗ ಮಾತ್ರ ಭಾರತತೀರ್ಥವು ಯಾತ್ರೆಯಾದೀತು. ಇಲ್ಲದಿದ್ದಲ್ಲಿ ವೃಥಾಟನೆಯಷ್ಟೆ. ತೀರ್ಥಗಳ ಮಹತ್ವವು ಯಾತ್ರೆ ಮತ್ತು ಭಾರತ ಎಂಬ ಎರಡು ಪದಗಳಿಂದ ವ್ಯಕ್ತವಾಗುವುದು. ಜ್ಞಾನಿಗಳಿಂದ ಸೇವಿಸಲ್ಪಟ್ಟ ತೀರ್ಥವು ಜೀವಿಯ ಭವಭೀತಿಜನಿತಯಾತನೆಯನ್ನು ದೂರಮಾಡಿ ಭಾವರೂಪವಾದ ಪರಂಜ್ಯೋತಿಯಲ್ಲಿ ಜೀವಿಯನ್ನು ನೆಲೆನಿಲ್ಲಿಸಿದಲ್ಲಿ ಅದು ನಿಜವಾದ ಭಾರತತೀರ್ಥಯಾತ್ರೆಯಾಗುವುದು. ದೋಷಾಪನಯನವೆಂಬುದು ತೀರ್ಥಯಾತ್ರೆಯ ಅವಿಭಾಜ್ಯ ಅಂಗ. ತ್ರಿಗುಣಮಯವಾದ ಪ್ರಕೃತಿಯಲ್ಲಿ ಏರು- ಪೇರುಗಳೇರ್ಪಡುವುವು. ಅದರ ಪರಿಣಾಮವಾಗಿ ದೋಷಗಳು ಕಾಲಕಾಲಕ್ಕೆ ಸಂಭವಿಸುವುವು. ಆ ದೋಷಗಳನ್ನು ತೆಗೆಯುವ ಸಾಮರ್ಥ್ಯವು ತೀರ್ಥಗಳಲ್ಲುಂಟು. ನೀರು ಮತ್ತು ಬೆಂಕಿಗಳಿಗಲ್ಲದೆ ಬೇರಾವ ಪದಾರ್ಥದಲ್ಲೂ ದೋಷಗಳನ್ನು ತೆಗೆಯಬಲ್ಲ ಸಾಮರ್ಥ್ಯವಿರುವುದಿಲ್ಲ. ಅವೆರಡು ಸ್ವತಃ ಶುದ್ಧವಾದ ಎರಡು ಪದಾರ್ಥಗಳು. ಹಾಗಾಗಿಯೇ, ಮಹಾಕವಿ ಭವಭೂತಿಯು ''ತೀರ್ಥೋದಕಂ ಚ ವಹ್ನಿಶ್ಚ ನಾನ್ಯತಃ ಶುದ್ಧಿಮರ್ಹತಃ'' ಎಂದು ಘೋಷಿಸಿರುವನು.

ಆತ್ಮಜ್ಞಾನಿಗಳಲ್ಲದೆ ಬೇರಿನ್ನಾರೂ ಕೂಡ ತೀರ್ಥದ ತೀರ್ಥತ್ವವನ್ನು ತಂದುಕೊಡಲಾರರು. ''ಪ್ರಾಯೇಣ ತೀರ್ಥಾಭಿಗಮಾಪದೇಶೈಃ ಸ್ವಯಂ ಹಿ ತೀರ್ಥಾನಿ ಪುನಂತಿ ಸಂತಃ *(ಭಾಗವತ ೧.೧೯.೮)* ''ತೀರ್ಥೀಕುರ್ವಂತಿ ತೀರ್ಥಾನಿ'' ಇತ್ಯಾದಿ ಮಾತುಗಳೂ ಇದನ್ನೇ ಪುಷ್ಟೀಕರಿಸುತ್ತವೆ. ಹಾಗಾಗಿ, ಆತ್ಮಜ್ಞಾನಿಗಳನ್ನು ಹೊರತುಪಡಿಸಿ ಬೇರೆ ಸಾಮಾನ್ಯ ಜೀವಿಗಳು ತೀರ್ಥಕ್ಷೇತ್ರಕ್ಕೆ ಭೇಟಿಕೊಡುವುದು, ಅಲ್ಲಿ ತಂಗುವುದು, ಅನುಷ್ಠಾನಾದಿಗಳನ್ನು ಕೈಗೊಳ್ಳುವುದು, ಎಲ್ಲವೂ ಅವರಿಗುಂಟಾದ, ದೋಷಗಳನ್ನು ಹೋಗಲಾಡಿಸಿಕೊಂಡು ಆತ್ಮಜ್ಞಾನವನ್ನರಸಲು ಆಗಿರುತ್ತದೆ. ಆತ್ಮಜ್ಞಾನಸಂಪನ್ನರು ತಾವೇ ತೀರ್ಥ

ರೂಪರಾಗಿರುತ್ತಾರಾದ್ದರಿಂದ, ''ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇಽರ್ಜುನ'' ಎಂಬಂತೆ ಅವರ ಎಲ್ಲ ಸಂಚಿತ ಕರ್ಮಗಳೂ ದಗ್ಧವಾಗಿರುತ್ತಾದ್ದರಿಂದ, ದೋಷಾಪನಯನವನ್ನುದ್ದೇಶಿಸಿ ಯಾತ್ರೆಯನ್ನು ಕೈಗೊಳ್ಳಬೇಕಾದ ಆವಶ್ಯಕತೆಯಿರುವುದಿಲ್ಲವಷ್ಟೆ. ತೀರ್ಥಗಳಲ್ಲಿ ದೋಷಗಳನ್ನು, ಪಾಪಗಳನ್ನು ಹೋಗಲಾಡಿಸಲು ಬೇಕಾದ ಶಕ್ತಿಸಾಮರ್ಥ್ಯಗಳು ಸದಾ ನೆಲೆಸಿರುತ್ತದೆ.

'ಸರ್ವೇಷಾಂ ಸರ್ವತೀರ್ಥಾನಿ ಪಾಪಘ್ನಾನಿ ಸದಾ ನೃಣಾಮ್' ಎಂಬುದಾಗಿ ನಾರಾಯಣ ಭಟ್ಟನು ತನ್ನ ತ್ರಿಸ್ಥಲೀ ಸೇತುವೆಂಬ ಗ್ರಂಥದಲ್ಲಿ ಉದ್ಗರಿಸಿದ್ದಾನೆ. ತೀರ್ಥಗಳಲ್ಲೂ ಅನೇಕ ಪ್ರಭೇದಗಳುಂಟು. ಸ್ವಯಂಭೂ ತೀರ್ಥಗಳು. ಯಥಾ ಪ್ರಭಾಸ ಕ್ಷೇತ್ರ. ನಿರ್ಮಿತ ತೀರ್ಥಗಳು. ಜ್ಞಾನಿಗಳ ತಮ್ಮ ಅಂತರಂಗದನುಭವದಿಂದ ಸೂಚಿಸಿ ನಿರ್ಮಿಸಿರುವ ಕ್ಷೇತ್ರಗಳು. ಇದೇ ರೀತಿಯಾಗಿ, ದೈವ ತೀರ್ಥ, ಅಸುರ ತೀರ್ಥ, ಮಾನುಷ ತೀರ್ಥ, ಭೌಮ ತೀರ್ಥ, ಅಂತರಿಕ್ಷ ತೀರ್ಥ, ತ್ರಿಲೋಕ ತೀರ್ಥವೆಂಬುದಾಗಿ ಹಲವಾರು ಪ್ರಭೇದಗಳಿವೆ.

ಇಂತಹ ಪವಿತ್ರವಾದ ತೀರ್ಥಕ್ಷೇತ್ರಗಳನ್ನು ಸಂಕಲ್ಪ ಪುರಸ್ಸರವಾಗಿ, ನಿಗದಿತ ಕಾಲದಲ್ಲಿ ಭೇಟಿಯಿತ್ತಾಗ ಅದು ಯಾತ್ರೆಯಾಗುವುದು. ಸಾಕ್ಷಾತ್ ಆದಿಶೇಷನ ಅವತಾರವಾಗಿದ್ದರೂ, ಲೋಕಸಂಗ್ರಹಕ್ಕಾಗಿಯೂ ಮತ್ತು ಲೋಕಶಿಕ್ಷಣಕ್ಕಾಗಿಯೂ ಭಗವಾನ್ ಬಲರಾಮನು ಭಾರತತೀರ್ಥಯಾತ್ರೆಯನ್ನು ಕೈಗೊಂಡಿದ್ದಾನೆಂಬ ಕಥೆಯು ಶ್ರೀಮದ್ಭಾಗತದ ದಶಮಸ್ಕಂಧದ ೭೮ ಹಾಗೂ ೭೯ ನೇ ಅಧ್ಯಾಯಗಳಲ್ಲಿ ಉಲ್ಲೇಖಿತವಾಗಿದೆ.

**ಕಥಾಸಂಕ್ಷೇಪ**

ಕುರುಪಾಂಡವರ ಯುದ್ಧವಿನ್ನು ಅನಿವಾರ್ಯವೆಂಬ ವಾರ್ತೆಯನ್ನು ಕೇಳಿ, ತಾನು ಅವರೀರ್ವರಲ್ಲಿ ಯಾರೊಬ್ಬರ ಪಕ್ಷವನ್ನು ವಹಿಸುವುದು ತರವಲ್ಲವಾದ್ದರಿಂದ ತಟಸ್ಥನಾಗಿರಬೇಕೆಂದು ನಿರ್ಣಯಿಸಿ ಭಗವಾನ್ ಬಲರಾಮನು ಪ್ರಭಾಸ ಕ್ಷೇತ್ರದಲ್ಲಿ ಮಿಂದು ದೇವತೆಗಳೊಡನೆ ಸರಸ್ವತಿಯ ಪಶ್ಚಿಮ ದಿಕ್ಕಿನ ಹರಿವನ್ನು ಅನುಸರಿಸಿ ಹೊರಟನು.

ಬಿಂದುಸರಸ್ಸು, ತ್ರಿತಕೂಪ, ಸುದರ್ಶನ, ವಿಶಾಲ, ಬ್ರಹ್ಮತೀರ್ಥ, ಚಕ್ರತೀರ್ಥಗಳನ್ನು ದಾಟಿ ಸರಸ್ವತೀ ನದಿಯ ಪೂರ್ವ ದಿಕ್ಕಿನ ಹರಿವನ್ನು ಅನುಸರಿಸಿದನು. ಹಾಗೆಯೇ ಯಮುನಾ ಹಾಗು ಗಂಗಾತೀರದ ಕ್ಷೇತ್ರಗಳಿಗೆ ಭೇಟಿಯಿತ್ತು ನೈಮಿಷಾರಣ್ಯವನ್ನು ಪ್ರವೇಶಿಸಿದನು. ಅಲ್ಲಿ ಋಷಿಗಳು ದೀರ್ಘಸತ್ರವೊಂದನ್ನು ಸಂಪನ್ನಗೊಳಿಸುತ್ತಿದ್ದರು. ಭಗವಾನ್ ಬಲರಾಮನು ಆಗಮಿಸಿರುವುದನ್ನು ಮನಗಂಡು ಋಷಿಗಳು ಎದ್ದುನಿಂತು ಅಭಿವಾದಿಸಿ ಪೂಜಿಸಿದರು. ಅವರು ಕೊಟ್ಟ ಆಸನದಲ್ಲಿ ಕುಳಿತಂತಹ ಭಗವಾನ್ ಬಲರಾಮನು ವ್ಯಾಸದೇವರ ಶಿಷ್ಯನಾದ ರೋಮಹರ್ಷಣನು ತಾನು ಬಂದಾಗ ಎದ್ದು ನಿಲ್ಲದೇ ಇದ್ದದ್ದನ್ನು ಗಮನಿಸಿ ಕೋಪಗೊಂಡನು. ಜನ್ಮತಃ ಸೂತನಾಗಿಯೂ ಬ್ರಹ್ಮಜ್ಞಾನಿಗಳೆಲ್ಲರೂ ಎದ್ದು ನಿಂತು ಗೌರವಿಸುತ್ತಿರಲು, ಸಾಕ್ಷಾತ್ ವೇದವ್ಯಾಸರಿಂದ ವೇದಶಾಸ್ತ್ರಗಳ ಮರ್ಮವನ್ನರಿತಿದ್ದರೂ, ನಿರಂಕುಶನಾಗಿ, ಸ್ವೇಚ್ಛೆಯಿಂದ, ವ್ಯವಹರಿಸಿದ್ದು ಭಗವಾನ್ ಬಲರಾಮನಿಗೆ ಸರಿಕಾಣದೇ ಹೋಯಿತು. ಈ ರೀತಿಯ ಡಾಂಭಿಕರ ಸಂಹಾರಕ್ಕಾಗಿಯೇ ತಾನು ಅವತಾರ ಮಾಡಿರುವುದೆಂದು ಸ್ಮರಿಸಿ, ಬಲರಾಮನು ಭೂಭಾರ ಹರಣ ಕರ್ಮದಿಂದ ನಿವೃತ್ತನಾಗಿದ್ದರೂ, ರೋಮಹರ್ಷಣನ ಅಪರಾಧವು ಸರ್ವತಾ ಕ್ಷಮ್ಯವಲ್ಲವೆಂದೆಣಿಸಿ ದರ್ಭಾಗ್ರದಿಂದ ರೋಮಹರ್ಷಣನನ್ನು ಸಂಹರಿಸಿದನು.

ಆ ಕ್ಷಣದಲ್ಲಿ ಋಷಿಗಳಲ್ಲಿ ಕೋಲಾಹಲವುಂಟಾಗಿ ಎಲ್ಲರೂ ಒಕ್ಕೊರಲಿನಲ್ಲಿ ಬಲರಾಮನನ್ನುದ್ದೇಶಿಸಿ ''ಪ್ರಭೋ! ತಮ್ಮಿಂದ ಅಪಚಾರವಾಗಿದೆ. ಇದು ಘೋರ ಅಧರ್ಮ. ರೋಮಹರ್ಷಣನಿಗೆ ನಾವು ಈ ಸತ್ರದ ಬ್ರಹ್ಮತ್ವವನ್ನು ಸತ್ರಸಮಾಪ್ತಿ ಪರ್ಯಂತ ಆಯುಸ್ಸನ್ನು ಮತ್ತು ಶಾರೀರಿಕ ಅನಾಯಾಸವನ್ನು ಕೊಟ್ಟಿದ್ದೆವು. ಹಾಗಾಗಿ, ತಮ್ಮಿಂದ ತಿಳಿಯದೇ ಬ್ರಹ್ಮಹತ್ಯೆಯು ನಡೆದು ಹೋಗಿದೆ. ಸ್ವಯಂ ಯೋಗೇಶ್ವರರಾದ್ದರಿಂದ ಶಾಸ್ತ್ರಗಳು ನಿಮ್ಮನ್ನು ನಿಯಮಿಸಲಾರವು. ಆದರೆ, ನೀನು ಒಂದು ವೇಳೆ, ಈ ಬ್ರಹ್ಮಹತ್ಯಾ ದೋಷ ಪರಿಹಾರವನ್ನು ಆಚರಿಸಿದ್ದೇ ಆದಲ್ಲಿ, ಲೋಕಕ್ಕೊಂದು ಮಾದರಿಯಾದೀತು'' ಎಂಬ ಮಾತನ್ನಾಡಿದರು. ಭಗವಾನ್ ಬಲದೇವನು ಅದನ್ನೊಪ್ಪಿ ತಾನು ಪ್ರಾಯಶ್ಚಿತ್ತವನ್ನು ಮಾಡುವುದಾಗಿಯೂ, ಅದರ ನಿಯಮಗಳನ್ನು ಮತ್ತು ಸ್ವರೂಪವನ್ನು ಋಷಿಗಳೇ ನಿರ್ಧರಿಸಬೇಕೆಂದು ತಿಳಿಸಿದನು. ಋಷಿಗಳು ಈಗಾಗಲೆ ಕೊಟ್ಟಿದ್ದ ತಮ್ಮ ವರದಾನ ವ್ಯರ್ಥವಾಗದಂತೆ ಭಗವಾನ್ ಬಲರಾಮನ ಆಯುಧವೂ ನಿರರ್ಥಕವಾಗದಂತೆ ಮತ್ತು ಮೃತ್ಯುವಿನ ನಿಯಮವೂ (ಒಮ್ಮೆ ಮೃತನಾದವನು ಮತ್ತೆ ಜೀವಿತನಾಗದಂತೆ) ವ್ಯತ್ಯಸ್ತವಾಗದಂತೆ ಬಲರಾಮನೇ ಉಪಾಯವನ್ನು ಹೇಳಬೇಕಾಗಿ ಋಷಿಗಳು ವಿನಂತಿಸಿಕೊಂಡರು. ಬಲರಾಮನು ''ಆತ್ಮಾ ವೈ ಪುತ್ರ ಉತ್ಪನ್ನಃ'' ಜೀವಿಯು ತಾನೇ ತನ್ನ ಮಗನ ರೂಪದಲ್ಲಿ ಜನಿಸುತ್ತಾನೆಂಬ ವೇದವಾಕ್ಯಕ್ಕನುಸಾರವಾಗಿ ರೋಮಹರ್ಷಣನ ಪುತ್ರನಿಗೆ ಆಯಸ್ಸು, ಬ್ರಹ್ಮತ್ವ ಮತ್ತು ಶಾರೀರಿಕ ಅನಾಯಾಸಗಳು ಸಿದ್ಧಿಸಲೆಂದು ಅನುಗ್ರಹಿಸುತ್ತಾನೆ. ತನ್ನ ಪ್ರಾಯಶ್ಚಿತ್ತವನ್ನು ಸೂಚಿಸಬೇಕಾಗಿ ಬಲರಾಮನನ್ನು ವಿನಂತಿಸಿಕೊಳ್ಳಲು, ಇಲ್ವಲನ ಮಗನಾದ ಬಿಲ್ವಲನೆಂಬ ರಾಕ್ಷಸನ ಪೀಡೆಯಿಂದ ತಮ್ಮನ್ನು ಮತ್ತು ತಮ್ಮ ಸತ್ರವನ್ನು ಕಾಪಾಡಬೇಕೆಂದು ಋಷಿಗಳು ಬಲರಾಮನನ್ನು ಪ್ರಾರ್ಥಿಸುತ್ತಾರೆ. ಅದರಂತೆ ಬಲರಾಮನು ಬಿಲ್ವಲನನ್ನು ಸಂಹರಿಸುತ್ತಾನೆ. ತರುವಾಯ,

**ತತಶ್ಚ ಭಾರತಂ ವರ್ಷಂ ಪರೀತ್ಯ ಸುಸಮಾಹಿತಃ ।**
**ಚರಿತ್ವಾ ದ್ವಾದಶಮಾಸಾನ್ ತೀರ್ಥಸ್ನಾಯೀ ವಿಶುದ್ಧ್ಯಸೇ ॥**

*(ಭಾಗವತ ೧೦.೭೮-೪೦)*

ಒಂದು ವರ್ಷದ ಕಾಲ ಭಾರತವರ್ಷವನ್ನು ಸುತ್ತಾಡಿ ತೀರ್ಥಸ್ನಾನವನ್ನು ಮಾಡಿದಲ್ಲಿ ಬ್ರಹ್ಮಹತ್ಯಾದೋಷವು ಪರಿಹೃತವಾಗುವುದೆಂದು ಋಷಿಗಳು ಸೂಚಿಸುತ್ತಾರೆ. ಅದರಂತೆ ಬಲರಾಮದೇವರು ಭಾರತತೀರ್ಥಯಾತ್ರೆಯನ್ನು ಕೈಗೊಂಡಿದ್ದು.

## ವಿಮರ್ಶೆ

ಬ್ರಹ್ಮಹತ್ಯೆಯೆಂಬುದು ಪಂಚಮಹಾಪಾತಕಗಳಲ್ಲೊಂದು. ಅದರ ಪರಿಹಾರವು ತೀರ್ಥಯಾತ್ರೆಯನ್ನು ಮಾಡುವುದರಿಂದ ಪರಿಹಾರವಾಗುತ್ತದೆಯೆಂದು ಈ ಕಥಾನಕವು ಸೂಚಿಸುತ್ತಾದರೂ, ಸೂಕ್ಷ್ಮವಾಗಿ ವಿಚಾರಿಸಬೇಕಾದ ಅಂಶಗಳೂ ಬಹಳಷ್ಟಿವೆ. ಪರಿಹಾರ ಪ್ರಾಯಶ್ಚಿತ್ತಾದಿಗಳೆಲ್ಲವೂ ಅಧಿಕಾರಿಯನ್ನವಲಂಬಿಸಿರುತ್ತವೆ. ಉತ್ತಮ-ಮಧ್ಯಮ-ಅಧಮ ಅಧಿಕಾರಿಗಳಿಗನುಗುಣವಾಗಿ ಪರಿಹಾರಗಳು ಬೇರೆಯಾಗುತ್ತವೆ. ತೀರ್ಥಯಾತ್ರೆಯಿಂದ ಬ್ರಹ್ಮಹತ್ಯಾ ದೋಷವೂ ಪರಿಹಾರವಾಗುವುದೆಂಬುದು ನಿಜವೇ ಆದರೂ, ಮನಸ್ಸಿನಲ್ಲಿ ಆ ಕಲ್ಮಷವೂ ಹೋಗದಿದ್ದರೆ, ತೀರ್ಥಯಾತ್ರೆಗೆ ಯಾವ ಅರ್ಥವೂ ಇರದು. ಹಾಗಾಗಿಯೇ

**ಸ ಸ್ನಾತೋ ಯೋ ದಮಸ್ನಾತಃ ಶ್ರದ್ಧಾಶುದ್ಧಮನೋಮಲಃ ।**

ಮನೋನಿಗ್ರಹವನ್ನುಳ್ಳ ಶ್ರದ್ಧೆಯಿಂದ ಮನಸ್ಸಿನ ಕಲ್ಮಷಗಳನ್ನೆಲ್ಲಾ ದೂರಮಾಡಿಕೊಂಡಂತಹ ಜೀವಿಯು ನಿಜವಾಗಿಯೂ ತೀರ್ಥಸ್ನಾನ ಮಾಡಿದವನಾಗುತ್ತಾನೆ ಎಂದು ಹೇಳಲಾಗುತ್ತದೆ. ತೀರ್ಥಕ್ಷೇತ್ರದಲ್ಲಿದ್ದ ಮಾತ್ರದಿಂದ ಯಾತ್ರೆಯಾಗಲೀ, ಭಾರತತೆಯಾಗಲೀ ಸಿದ್ಧಿಸುವುದೆಂದು ಹೇಳಲಾಗದು. ಎಷ್ಟೋ ಜಲಚರ ಪ್ರಾಣಿಗಳು ನೀರಿನಲ್ಲೇ ಜೀವವನ್ನು ಕಳೆಯುತ್ತವೆ. ಎಲ್ಲಿಯವರೆಗೂ ಮನಶ್ಶುದ್ಧಿಯಿಲ್ಲವೋ, ಅಲ್ಲಿಯವರೆಗೂ ಸಿದ್ಧಿಯಾಗುವುದಿಲ್ಲ.

ತೀರ್ಥಯಾತ್ರೆಯನ್ನು ಕೈಗೊಳ್ಳುವಾಗ ತೀರ್ಥಕ್ಷೇತ್ರಗಳ ಆನುಪೂರ್ವಿಯೂ ಮಹತ್ಪೂರ್ಣವಾದದ್ದಾಗಿರುತ್ತದೆ. ಋಷಿಗಳಿಂದ ಅನುಜ್ಞೆಯನ್ನು ಪಡೆದು ಭಗವಾನ್ ಬಲರಾಮನು ಬ್ರಹ್ಮವೇತ್ತರೊಡನೆ ಕೌಶಕೀ ನದಿಯಲ್ಲಿ ಸ್ನಾನಮಾಡಿ ಸರಯೂ ನದಿಯನ್ನನುಸರಿಸುತ್ತಾ ಪ್ರಯಾಗಕ್ಕೆ ತಲುಪಿ, ದೇವ-ಪಿತೃತರ್ಪಣವನ್ನು ಮಾಡಿ, ಪುಲಹಾಶ್ರಮವನ್ನು ಸೇರಿದನು. ತದನಂತರ, ಗೋಮತೀ, ಗಂಡಕೀ, ವಿಪಾಶಾ ನದಿಗಳಲ್ಲೂ ಶೋಣವೆಂಬ ನದದಲ್ಲೂ ಸ್ನಾನ ಮಾಡಿ ಗಯೆಯಲ್ಲಿ ಪಿತೃತರ್ಪಣಾದಿಗಳನ್ನು ಮಾಡಿ ಗಂಗಾಸಾಗರಸಂಗಮದಲ್ಲಿ ಅನೇಕ ಶುದ್ಧಿಕರ್ಮಗಳನ್ನು ಮಾಡಿದನು. ಮಹೇಂದ್ರ ಪರ್ವತದಲ್ಲಿ ಪರಶುರಾಮಸ್ವಾಮಿಯನ್ನು ಕಂಡು ನಮಸ್ಕರಿಸಿ, ಗೋದಾವರೀ ನದಿಯ ಏಳು ಸ್ರೋತಸ್ಸುಗಳಲ್ಲಿ ಮಿಂದು, ವೇಣಾ, ಪಂಪಾ, ಭೀಮರಥಿ ನದಿಗಳಲ್ಲೂ ಸ್ನಾನ ಮಾಡಿದನು. ಸ್ಕಂದ ಸ್ವಾಮಿಯ ದರ್ಶನಗೈದು, ಶ್ರೀಶೈಲದಲ್ಲಿ ಮಲ್ಲಿಕಾರ್ಜುನನ ದರ್ಶನ ಪಡೆದು, ತಿರುಪತಿಯಲ್ಲಿ ವೆಂಕಟರಮಣನ ದರ್ಶನವನ್ನು ಪಡೆದನು. ಕಾಮಕೋಷ್ಣೀ ಮತ್ತು ಕಾಂಚೀ ಕ್ಷೇತ್ರಗಳಲ್ಲಿದ್ದು, ಕಾವೇರಿಯಲ್ಲಿ ಮಿಂದು, ಶ್ರೀರಂಗನ ದರ್ಶನವನ್ನು ಪಡೆದು, ವೃಷಭಾದ್ರಿ ಪರ್ವತದಲ್ಲಿ ದಕ್ಷಿಣ ಮಥುರೆಯೆಂದು ಪ್ರಸಿದ್ಧವಾದ ಕ್ಷೇತ್ರದಲ್ಲಿದ್ದು ದಕ್ಷಿಣ ಸಮುದ್ರತೀರದಲ್ಲಿ ಅರ್ಥಾತ್ ರಾಮೇಶ್ವರದಲ್ಲಿ ಗೋದಾನಾದಿಗಳನ್ನು ಮಾಡಿ ಕೃತಮಾಲಾ ತಾಮ್ರಪರ್ಣೀ ನದಿಗಳನ್ನು, ಮಲಯಾಚಲವನ್ನು ನೋಡಿ ಅಗಸ್ತ್ಯಮಹರ್ಷಿಗಳ ಅನುಗ್ರಹವನ್ನು ಪಡೆದನು. ತದನಂತರ ಕನ್ಯಾಕುಮಾರಿಯಲ್ಲಿ ದೇವಿಯ ದರ್ಶನವನ್ನು ಮಾಡಿ, ಫಾಲ್ಗುಣ ತೀರ್ಥದಲ್ಲಿ ಮತ್ತು ಪಂಚಾಪ್ಸರ ಸರೋವರದಲ್ಲಿ ಗೋದಾನ ಮಾಡಿದನು. ಕೇರಳ ಮತ್ತು ತ್ರಿಗರ್ತ ದೇಶಗಳಲ್ಲಿ ಸಂಚರಿಸುತ್ತಾ ಗೋಕರ್ಣದಲ್ಲಿ ಪರಮೇಶ್ವರನ ದರ್ಶನವನ್ನು ಪಡೆದನು. ಅಲ್ಲಿಯೇ ಪಾರ್ವತೀ ದೇವಿಯ ದರ್ಶನವನ್ನೂ ಪಡೆದು, ಶೂರ್ಪಾರಕ ಕ್ಷೇತ್ರದಲ್ಲಿ ತಾಪೀ, ಪಯೋಷ್ಣೀ ಮತ್ತು ನಿರ್ವಿಂಧ್ಯಾ ನದಿಗಳಲ್ಲಿ ಸ್ನಾನಾದಿಗಳನ್ನು ಮಾಡಿದನು. ಅಲ್ಲಿಂದ ದಂಡಕಾರಣ್ಯಕ್ಕೆ ತಲುಪಿ, ರೇವಾನದೀ ತೀರದಲ್ಲಿ ಮಿಂದು, ಮಾಹಿಷ್ಮತೀ ನಗರವನ್ನು ಪ್ರವೇಶಿಸಿ ಮನುತೀರ್ಥದಲ್ಲಿ ಸ್ನಾನ ಮಾಡಿ ಮರಳಿ ಮತ್ತೆ ಪ್ರಭಾಸ ಕ್ಷೇತ್ರವನ್ನು ತಲುಪಿದನು.

ಹೀಗೆ ಪ್ರಭಾಸ ಕ್ಷೇತ್ರದಿಂದ (ಬೆಳಕಿನ ನೆಲೆಯಿಂದ) ಆರಂಭವಾದ ಯಾತ್ರೆಯು ಮರಳಿ ಅದೇ ಕ್ಷೇತ್ರದಲ್ಲಿ ನೆಲೆನಿಂತಿತು. ಇದು ಪ್ರತಿಯೊಂದು ತೀರ್ಥಯಾತ್ರೆಯೂ ಯಾವ ಮೂಲದಿಂದ ಹೊರಡಬೇಕು ಮತ್ತು ಎಲ್ಲಿ ಉಪಸಂಹಾರವಾಗಬೇಕೆಂಬ ವಿಚಾರವನ್ನು ಮನದಟ್ಟು ಮಾಡಿಸುತ್ತದೆ. ಅಷ್ಟೇ ಅಲ್ಲದೇ, ತೀರ್ಥಯಾತ್ರೆಯಲ್ಲಿನ ಕ್ಷೇತ್ರಗಳು ಅಂತರಂಗದಲ್ಲಿ ಆತ್ಮಸಾಧನೆಯ ಮಾರ್ಗದಲ್ಲಿ ಗುರ್ವನುಗ್ರಹದಿಂದ ಗೋಚರವಾಗತಕ್ಕ ಕ್ಷೇತ್ರಗಳಾಗಿರುತ್ತವೆಯಾದ್ದರಿಂದ, ಲೌಕಿಕವಾಗಿ ಯಾತ್ರೆಯಲ್ಲಿನ ಕ್ಷೇತ್ರಗಳು ಪ್ರದಕ್ಷಿಣಾಕಾರವಾಗಿ ಸೂತ್ರಿತವಾಗಿರಬೇಕೆಂಬ ಅಂಶವೂ ವ್ಯಕ್ತವಾಗುತ್ತದೆ.

ತೀರ್ಥಯಾತ್ರೆಯನ್ನು ಋಷಿಗಳು ನಿರ್ಣಯಿಸುತ್ತಾರಾದ್ದರಿಂದ ಶಮ-ದಮಾದಿಗಳು ಸರ್ವಥಾ ಪಾಲಿಸಬೇಕಾಗುವುವು. ತೀರ್ಥಕ್ಷೇತ್ರಗಳಲ್ಲಿ ಬಲರಾಮನು ಮಾಡಿದ ದಾನದ ಉಲ್ಲೇಖವು ದಾನದ ಮಹತ್ವವನ್ನೂ ಎತ್ತಿ ತೋರಿಸುತ್ತದೆ. ತೀರ್ಥಕ್ಷೇತ್ರದಲ್ಲಿ ಮಾಡುವ ದಾನವು ಅಕ್ಷಯವಾಗುವುದೆಂದು ಸಂಪ್ರದಾಯದಲ್ಲಿ ಪ್ರಸಿದ್ಧಿಯುಂಟು. ಕ್ಷಯವಿಲ್ಲದ ಸ್ಥಿತಿಗೆ ನಮ್ಮನ್ನೊಯ್ಯುವುದೆಂಬುದು ಅದರ ಮರ್ಮ.

ಒಟ್ಟಾರೆ ತೀರ್ಥಕ್ಷೇತ್ರಗಳು ಅಂತರಂಗದಲ್ಲಿ ಗೋಚರವಾಗುವ, ನಿತ್ಯ ಸತ್ಯಗಳಷ್ಟೇ ಅಲ್ಲದೇ, ಭೌಗೋಳಿಕವಾಗಿ ಆ ಕ್ಷೇತ್ರಕ್ಕೆ ತೆರಳಿದಾಗ, ಅಲ್ಲಿ ತಂಗಿದಾಗ, ಧರ್ಮ-ಕರ್ಮ ಸಂಯೋಗದಿಂದ, ಅಂತರಂಗದಲ್ಲಿ ಆಯಾ ಮಾರ್ಗಗಳು ತೆರೆಯುವ ಸನ್ನಿವೇಶಗಳುಂಟೆಂದು ಆತ್ಮಾನುಭವಿಗಳ ಮಾತುಂಟು.

ಅಧಿಕಾರ ಸಂಪತ್ತನ್ನು ಸಂಪಾದಿಸಲೋಸುಗವೂ ತೀರ್ಥಯಾತ್ರೆಯನ್ನು ಕೈಗೊಳ್ಳಬಹುದಾದ್ದರಿಂದ ಅಂತರಂಗ-ಬಹಿರಂಗಗಳ ತಂತುವು ತುಂಡಾಗದಂತೆ ಯಾತನೆಯು ದೂರವಾಗಿ ಭಾರತತೆಯು ಸಿದ್ಧಿಸುವಂತೆ ತೀರ್ಥಕ್ಷೇತ್ರಗಳ ಕುರಿತಾಗಿ ನಮ್ಮ ಹರಿವಿರುವಂತಾಗಲೆಂಬ ಪ್ರಾಮಾಣಿಕವಾದ ಆಶಯದೊಡನೆ ಈ ನುಡಿಸುಮನಗಳನ್ನು ತೀರ್ಥರೂಪಿಯಾದ ತೀರ್ಥಗಳಿಗೆಲ್ಲಾ ತೀರ್ಥತ್ವವನ್ನು ಕೊಡುವ ಭಗವಂತನ ಚರಣಾರವಿಂದಗಳಲ್ಲಿ ಸಮರ್ಪಿಸುತ್ತೇನೆ. ಮಂಗಳಂ. ✽